ಕರ್ನಾಟಕ ವಿಧಾನಸಭೆ

ಮಂಗಳವಾರ 1ನೇ ಫೆಬ್ರವರಿ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಪ್ರಕಟಣೆ

ವಿಷಯ:– ವಿಧಾನಸಭಾ ಸದಸ್ಯರಾದ ಶ್ರೀ ಯು.ಟಿ. ಫರೀದ್ ರವರು ಸದನಕ್ಕೆ ಗೈರು ಹಾಜರಾಗಲು ಅನುಮತಿ ಕೋರಿಕೆ

ಅಧ್ಯಕ್ಷರು : ವಿಧಾನಸಭಾ ಸದಸ್ಯರಾದ ಶ್ರೀ ಯು.ಟಿ. ಫರೀದ್‌ರವರು ಅನಾರೋಗ್ಯದ ಕಾರಣ ದಿನಾಂಕ 20–01–2005ರಿಂದ ಪ್ರಾರಂಭವಾಗಿರುವ ಪ್ರಸಕ್ತ ಅಧಿವೇಶನದ ಮುಕ್ತಾಯದವರೆಗೂ ಗೈರು ಹಾಜರಿ ಆಗಲು ಅನುಮತಿಯನ್ನು ಕೋರಿ ಪತ್ರವನ್ನು ಬರೆದಿರುತ್ತಾರೆ. ಇದಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸಲಾಗಿದೆ.

(ಸದನವು ಶ್ರೀ ಯು.ಟಿ. ಫರೀದ್‌ರವರಿಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ನೀಡಿತು.)

ಅಧ್ಯಕ್ಷರು : ಈಗ ಪ್ರಶ್ನೋತ್ತರ.

ಶ್ರೀ ಗೋವಿಂದ ಮಕಟಪ್ಪ ಕಾರಜೋಳ್ : ಮಾನ್ಯ ಅಧ್ಯಕ್ಷರೆ, ಇವೊತ್ತು ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ.....

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ನಿಮಗೆ ಮಾತನಾಡಲು ಈಗ ಅವಕಾಶವನ್ನು ಕೊಟ್ಟಿಲ್ಲ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ ಧರಣಿ ನಡೆಯುತ್ತಿರುವ ಬಗ್ಗೆ

ಶ್ರೀ ಗೋವಿಂದ ಮಕಟಪ್ಪ ಕಾರಜೋಳ್ : ಇಲ್ಲ. ಹಾಗಾಗೋದಿಲ್ಲ. ಇವೊತ್ತು ತಾವು ನಮಗೆ ಅವಕಾಶ ಕೊಡಲೇಬೇಕು.

ಅಧ್ಯಕ್ಷರು : ಕಾರ್‌ಜೋಳ್‌ರವರೇ, ಇದೇನು ವಿಧಾನಸಭೆಯೋ, ಏನು?

ಶ್ರೀ ಗೋವಿಂದ ಎಂ. ಕಾರ್‌ಜೋಳ್ : ದಯವಿಟ್ಟು ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ನೀವೇನು ನನಗೆ ಹೆದರಿಸುತ್ತಿದ್ದೀರೇನು? ಆ ಪದವನ್ನು ಮೊದಲು ನೀವು ವಾಪಸ್ಸು ತೆಗೆದುಕೊಳ್ಳಿ. ಆ ಪದವನ್ನು ವಾಪಸ್ಸು ತೆಗೆದುಕೊಳ್ಳಿ. ನಾವು ಅವಕಾಶ ಕೊಡದಿದ್ದರೆ ಎಂದು ಏರು ಧ್ವನಿಯಲ್ಲಿ ತಾವು ಮಾತನಾಡುವುದಕ್ಕೆ ಇಲ್ಲಿ ನಿಮಗೆ ಅವಕಾಶ ಇಲ್ಲ. ತಾವು ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಗೋವಿಂದ ಎಂ. ಕಾರ್‌ಜೋಳ್ : ನಾನು ಜವಾಬ್ದಾರಿಯಿಂದ ಮಾತನಾಡಿದ್ದೇನೆ. ನಾನು ಹೆದರಿಸುತ್ತಿಲ್ಲ.

ಅಧ್ಯಕ್ಷರು : ನೀವೇನು ನನಗೆ ಹೆದರಿಸುತ್ತಿದ್ದೀರೇನು? ಮಾತನಾಡುವಾಗ ಸರಿಯಾದ ರೀತಿಯಲ್ಲಿ ಪದ ಬಳಕೆ ಉಪಯೋಗಿಸಿ ಮಾತನಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಈಗ ಎಂ.ಪಿ.ಗಳು, ರೈತ ನಾಯಕರುಗಳೆಲ್ಲರೂ ಉಪವಾಸ ಕುಳಿತಿದ್ದಾರೆ.

ಅಧ್ಯಕ್ಷರು : ದಯಮಾಡಿ ತಾವುಗಳು ಕುಳಿತುಕೊಳ್ಳಿ. ಈಗಾಗಲೇ ಸದನದ ಸಭೆ ಆರಂಭವಾಗಿ ಎಷ್ಟು ದಿವಸಗಳಾಗಿದೆ ನೀವೇ ಹೇಳಿ. ಇಲ್ಲಿಯವರೆಗೂ ಯಾವುದಾದರೂ ಒಂದು ಪ್ರಮುಖವಾದ ವಿಚಾರ ಸದನದಲ್ಲಿ ಚರ್ಚೆಯಾಗಿದೆಯೇ? ಇನ್ನೂ ಕೂಡ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಆರಂಭವಾಗಿಲ್ಲ. ಇನ್ನೂ ಬಿಲ್ಸ್‌ಗಳೂ ಕೂಡ ಇವೆ. ಹೀಗಿರುವಾಗ ನೀವು ಈ ರೀತಿ ಮಾಡಿದರೆ ಹೇಗೆ? ನಾನು ತಮಗೆ ರಿಕ್ವೆಸ್ಟ್ ಮಾಡಿಕೊಂಡೆ, ನಿಯಮ 69ರ ಕೆಳಗಡೆ ಒಂದು ನೋಟೀಸ್ ಕೊಟ್ಟಿದ್ದೀರಿ. ಅದರ ಬಗ್ಗೆ ಚರ್ಚೆಯಾಗಲಿ, ನಾನು ಅವಕಾಶ ಮಾಡಿಕೊಡುತ್ತೇನೆ ಎಂದು ಒಪ್ಪಿದ್ದೇನೆ. ಈಗ ಕುಡಿಯುವ ನೀರಿನ ವಿಚಾರದ ಚರ್ಚೆಯನ್ನು ನಿಯಮ 69ರ ಕೆಳಗಡೆ ಎಂದು ಕನ್‌ವರ್ಟ್ ಮಾಡಿದ್ದೇನೆ. ಅದಕ್ಕೆ ಉತ್ತರ ಇದೆ. ಉತ್ತರವಾದ ಮೇಲೆ ಅವಕಾಶ ಮಾಡಿಕೊಡುತ್ತೇನೆ. ಚರ್ಚೆಯಾಗಲಿ. ಆದರೆ ಈ ರೀತಿ ನೀವು ಮಾಡಿದರೆ ಸರ್ಕಾರದವರು ಸರಿಯಾದ ರೀತಿಯಲ್ಲಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಈಗ ಸಮಯ ಹಾಳಾಗುತ್ತದೆ. ಆ ರೀತಿ ಆಗಬಾರದು.

ಶ್ರೀ ಗೋವಿಂದ ಎಂ. ಕಾರ್‌ಜೋಳ : ನಾನು ತಮ್ಮಲ್ಲಿ ದಯವಿಟ್ಟು ವಿನಂತಿ ಮಾಡುತ್ತೇನೆ. ರೈತರ ಬದುಕಿನ ಪ್ರಶ್ನೆ ಇಲ್ಲಿ ಇದೆ.

ಅಧ್ಯಕ್ಷರು : ಕಾರ್‌ಜೋಳ್‌ರವರೆ, ಪ್ರಶ್ನೋತ್ತರ ಆದ ಮೇಲೆ ಈ ವಿಚಾರವನ್ನು ತಾವು ಪ್ರಸ್ತಾಪ ಮಾಡಿ. ಅದಕ್ಕೆ ಒಂದರ್ಧ ಗಂಟೆ ನಿಗಧಿ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರ್‌ಜೋಳ : ಆಯಿತು ಅಧ್ಯಕ್ಷರೆ, ಏಕೆಂದರೆ ಇದು ಬಹಳ ಮಹತ್ವವಾದ ವಿಚಾರ.

ಅಧ್ಯಕ್ಷರು : ಆಯಿತು, ಆಯಿತು. ಈಗ

(2) ವಿಷಯ:– ಅಸಂಘಟಿತ ಟೈಲರಿಂಗ್ ಕಾರ್ಮಿಕರ ಸಮಸ್ಯೆ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ. ಈಗ ಇಲ್ಲಿ ಮುಖ್ಯಮಂತ್ರಿಗಳು ಇದ್ದಾರೆ. ನಾನು ಮಧ್ಯೆ ಪ್ರವೇಶ ಮಾಡುತ್ತಿದ್ದೇನೆ. ಇಡೀ ರಾಜ್ಯದಿಂದ ಒಂದು ಲಕ್ಷಕ್ಕೂ ಹೆಚ್ಚು ಜನರು ಟೈಲರಿಂಗ್ ಅಸೋಸಿಯೇಶನ್‌ರವರು ಬಂದಿದ್ದಾರೆ. ಅಸಂಘಟಿತ ಕಾರ್ಮಿಕರು, ಮದ್ರಾಸ್‌ನಲ್ಲಿರುವ ರೀತಿಯಲ್ಲಿ ನಮಗೆ ಒಂದು ವ್ಯವಸ್ಥೆ ಮಾಡಿ, ನಾವು ತಿಂಗಳಿಗೆ 20 ರೂಪಾಯಿಯಂತೆ ಕಟ್ಟುತ್ತೇವೆ. ಆ ಸವಲತ್ತನ್ನು ಒಟ್ಟು ರಿಟೈರ್ ಆದಮೇಲೆ 35 ವರ್ಷಗಳಾದ ಮೆಲೆ ಆ ಸವಲತ್ತುಗಳು ಸಿಗಬೇಕು ಎನ್ನುವ ದೃಷ್ಟಿಯಿಂದ ಅವರು ಹಾಗೆ ಕೇಳುತ್ತಿದ್ದಾರೆ. ಸದನವಾದ ಮೇಲೆ ತಾವೂ ಕೂಡ ಅಲ್ಲಿಗೆ ಬಂದು ಅವರನ್ನು ಮಾತನಾಡಿಸಿ ಹೋಗಬೇಕು ಮತ್ತು ಮದ್ರಾಸ್‌ನಲ್ಲಿರುವ ರೀತಿಯಲ್ಲಿಯೇ ಇಲ್ಲಿಯೂ ಅದನ್ನು ಜಾರಿಗೆ ತಂದರೆ ಲಕ್ಷಾಂತರ ಅಸಂಘಟಿತ ಕಾರ್ಮಿಕರಿಗೆ ಅನುಕೂಲವಾಗುತ್ತದೆ. ಈಗಾಗಲೇ ಕೇರಳದಲ್ಲೂ ಅದೇ ವ್ಯವಸ್ಥೆ ಇದೆ. ಅಲ್ಲಿ ಬಹಳ ಯಶಸ್ವಿಯಾಗಿ ಜಾರಿಗೆ ತಂದಿದ್ದಾರೆ. ಈಗಾಗಲೇ ಬೆಂಗಳೂರಿಗೆ ಬಂದಿರುವ ಆ ಅಸೋಸಿಯೇಶನ್ ಜನರು ಕಾರ್ಮಿಕ ಸಚಿವರನ್ನು ಕಂಡು ಅವರ ಮನವಿಯನ್ನು ಸಚಿವರಿಗೆ ಕೊಟ್ಟಿದ್ದಾರೆ. ಒಂದು ಲಕ್ಷಕ್ಕೂ ಹೆಚ್ಚು ಜನ ಬರುತ್ತಿರುವುದರಿಂದ ನಾವೆಲ್ಲರೂ ಒಟ್ಟಿಗೆ ಹೋಗಿ